<u>**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**</u>
<u>**ಸಿ.ಸಿ.490/2023**</u>

| | | |
|---|---|---|
| ಸಾಕ್ಷಿದಾರರ ಹೆಸರು | ಃ ದಿನೇಶ್ ಎಂ. | ಪ್ರಾ.ಸಾ-3 |
| ತಂದೆಯ ಹೆಸರು | ಃ ಮೋನಪ್ಪ ಶೆಟ್ಟಿ | ಚಾಸಾ-3 |
| ವಯಸ್ಸು | ಃ 48 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ ವ್ಯಾಪಾರ | ದಿನಾಂಕಃ11.03.2024. |
| ವಾಸಸ್ಥಳ | ಃ ಮರಸಣಿಗೆ | |

<u>**ಃಮುಖ್ಯ ವಿಚಾರಣೆ ಪ್ರಾಜ್ಞಾ.ಸ.ಸ.ಅ. ರವರಿಂದಃ**</u>

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿದ್ದು ಅವರ ಪರಿಚಯ ನನಗಿಲ್ಲ. ಚಾಸಾ-1, 2 ಮತ್ತು 4 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-3 ರ ಭಾವಚಿತ್ರದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ನಿಪಿ-2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಒ.3 ರ ಮೇಲಿನ ತಮ್ಮ ಸಹಿಯನ್ನು ಗುರುತಿಸಿದ್ದು ಅದನ್ನು ಎಂ.ಒ.3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ದಿ.28.11.2022 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, 4 ಭಾವಚಿತ್ರಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಮಹಜರ್ ನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7(ಎ), ಭಾವಚಿತ್ರಗಳನ್ನು ನಿಪಿ-8 ರಿಂದ 11 ಎಂದು ಗುರುತಿಸಲಾಯಿತು.

6 ತಿಂಗಳ ಹಿಂದೆ ಮರಸಣಿಗೆ ಬಸ್ ಸ್ಟ್ಯಾಂಡ್ ಬಳಿ ಮಹಜರ್ ಗೆಂದು ನನ್ನ ಸಹಿ ಪಡೆದಿರುತ್ತಾರೆ. ಆ ದಿನ ನಾನು ಎಂ.ಒ.3 ನ್ನು ನೋಡಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಿಪಿ-2 ಮತ್ತು ನಿಪಿ-7 ಕ್ಕೆ ಬೆಳಗ್ಗೆ ಸಮಯದಲ್ಲಿ ಸಹಿ ಮಾಡಿದ್ದು, ನನ್ನೊಂದಿಗೆ ಬೇರೆ ಯಾರು ಸಹಿ ಮಾಡಿದ್ದಾರ ಎಂದು ನನಗೆ ಗೊತ್ತಿಲ್ಲ. ನಿಪಿ-2 ಮತ್ತು 7 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಹಾಗೂ ಪೋಲಿಸರು ಆ ಬಗ್ಗೆ ಏನನ್ನು ಹೇಳಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಿಪಿ-3, ನಿಪಿ-8 ರಿಂದ 11 ರ ಭಾವಚಿತ್ರವನ್ನು ಬಸ್ ಸ್ಟ್ಯಾಂಡ್ ಬಳಿಯೇ ತೆಗೆಯಲಾಗಿದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.28.11.2022 ರಂದು ಕಳಸಾದ ಮರಸಣಿಗೆ ಗ್ರಾಮದ ಮಹೇಂದ್ರಗೌಡರವರ ಸ.ನಂ.230 ರ ಜಾಗದಲ್ಲಿ ಬೆ.10.00 ರಿಂದ 11.30 ರ ಸಮಯದಲ್ಲಿ ನಿಪಿ-7 ಕ್ಕೆ ಸಹಿ ಮಾಡಿದ್ದು ಆ ಸ್ಥಳದಲ್ಲಿಯೇ ನಿಪಿ-8 ರಿಂದ 11 ರ ಭಾವಚಿತ್ರಗಳನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ. ಆ ದಿನ ಆರೋಪಿಯು ದಿ.27.11.2022 ರಂದು ಸ.5.00 ಗಂಟೆ ಸಮಯಕ್ಕೆ ಚಾಸಾ-2 ರವರಿಗೆ ಹಲ್ಲೆ ಮಾಡಿದ ಜಾಗ ಇದೆ ಎಂದು ಹಾಗೂ ಒಂದು ಕತ್ತಿಯನ್ನು ತೋರಿಸಿ ಅದರಿಂದಲೇ ಚಾಸಾ-2 ರವರಿಗೆ ಹಲ್ಲೆ ಮಾಡಿರುವುದಾಗಿ ಪೋಲಿಸರ ಮುಂದೆ ಹಾಜರುಪಡಿಸಿದರು ಎಂದರೆ ಸರಿಯಲ್ಲ. ಆ ದಿನ ಆರೋಪಿ ನನ್ನ ಸಮಕ್ಷಮ ಹಾಜರುಪಡಿಸಿದ ಕತ್ತಿಯೇ ಎಂ.ಒ.3 ಎಂದರೆ ಸರಿಯಲ್ಲ.

ದಿ.08.12.2022 ರಂದು ಚಾಸಾ-1 ರವರು ತನ್ನ ಗಂಡ ಚಾಸಾ-2 ರವರಿಗೆ ಹಲ್ಲೆ ಮಾಡಿದ ಸ್ಥಳ ಎಂದು ಸ್ಥಳ ತೋರಿಸಿದ ಮೇರೆಗೆ ಅಲ್ಲಿ ಬೆ.11.00 ರಿಂದ 11.30 ರವರಗೆ ನಿಪಿ-2 ರಂತೆ ಮಹಜರ್ ಬರೆದಿದ್ದು ಆ ಸಮಯದಲ್ಲಿ ನಿಪಿ-3 ರ ಭಾವಚಿತ್ರ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ನನಗಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.</u>**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

SD/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.